ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ದಿನಾಂಕ 01/10/2003 ರಂದು ಪ್ರಾರಂಭಿಸಲಾಯಿತು

ಆ) ಮೂಲ ಅಂದಾಜು ಮೊತ್ತ ರೂ 20 00 ಲಕ್ಷ ಈ ಕಾಮಗಾರಿಗೆ ಇಲ್ಲಿಯವರೆಗೆ ಖರ್ಚಾದ ಹಣ 12 84 ಲಕ್ಷ ರೂ ಗಳು

ಇ) ಅಕ್ಟೋಬರ್ 2006ರಲ್ಲಿ ಪೂರ್ಣಗೊಳಿಸಲಾಗಿದೆ

786 (1252) ಶ್ರೀ ರಘು ಎಸ್ (ಶಾಂತಿನಗರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ಜಾಲ ಹೋಬಳಿ, ಹೊಸಹಳ್ಳಿ ಗ್ರಾಮದ ಸರ್ವೆ ನಂ 21ರಲ್ಲಿರುವ 200 ಎಕರೆ 30 ಗುಂಟೆ ವಿಸ್ತೀರ್ಣದ ಸರ್ಕಾರಿ ಗೋಮಾಳದ ಜಮೀನಿನಲ್ಲಿ ರಸ್ತೆ, ಸ್ಮಶಾನ ಇತ್ಯಾದಿಗಳಿರುವ ಪ್ರದೇಶವೆಷ್ಟು ,

ಆ) ಈ ಸರ್ವೆ ನಂ ನ ವಿಸ್ತೀರ್ಣದಲ್ಲಿ ಈವರೆಗೆ ದುರಸ್ಥಿಯಾಗಿರುವ ಪ್ರದೇಶ ಎಷ್ಟು ,

ಇ) ಆರ್ ಟಿ ಸಿ ಪ್ರಕಾರ ದುರಸ್ಥಿಯಾಗದೇ ಇರುವ ಪ್ರದೇಶ ಎಷ್ಟು ,

ಈ) ನಮೂನೆ 50 ಮತ್ತು 53ರ ನಡವಳಿಕೆ ನಡೆದು ವಜಾ ಆಗಿರುವ ವಿಸ್ತೀರ್ಣ ಎಷ್ಟು ,

ಉ) ನಮೂನೆ 50 ಮತ್ತು 53ರ ಅರ್ಜಿಗಳನ್ನು ಹೊರತುಪಡಿಸಿ ಒತ್ತುವರಿಯಾಗಿರುವ ಇತರೇ ಪ್ರದೇಶದ ವಿಸ್ತೀರ್ಣ ಎಷ್ಟು, (ವಿವರ ಒದಗಿಸುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 11 ಎಕರೆ 12 ಗುಂಟೆ

ಆ) ರಿ ಸ ಸಂ 160 ರಿಂದ 181ರ ವರೆಗೆ ಪೋಡಿ ದುರಸ್ತಿಯಾಗಿರುವ ಪ್ರದೇಶ 92 ಎಕರೆ 20 ಗುಂಟೆ

ಇ) 37 ಎಕರೆ 32 ಗುಂಟೆ

ಈ) 30 ಎಕರೆ 15 ಗುಂಟೆ

ಉ) 28 ಎಕರೆ 39 ಗುಂಟೆ (ವಿವರಗಳನ್ನು ಇದರೊಂದಿಗೆ ಲಗತ್ತಿಸಿ ಅನುಬಂಧದಲ್ಲಿ ನೀಡಲಾಗಿದೆ)

ಅನುಬಂಧ

(ರಿ ಸ ನಂ 21ರಲ್ಲಿ ಒತ್ತುವರಿಯಾಗಿರುವ ಬಾಬ್ತು ತಖ್ತೆ (ನಮೂನೆ 50 ಮತ್ತು 53ನ್ನು ಹೊರತುಪಡಿಸಿ)

ಕ್ರ.ಸಂ	ಬ್ಲಾಕ್ ಸಂಖ್ಯೆ	ಬಗರ್ ಹುಕುಂ ಸಾಗುವಳಿದಾರರ ಹೆಸರು	ಎ ಗುಂ
1	2	ತಿಮ್ಮಪ್ಪ ಬಿನ್ ತಾಯಪ್ಪ	4–05
2	4	ರಾಮಣ್ಣ ಬಿನ್ ತಿಮ್ಮಪ್ಪ	1–00
3	7	ಡಿ ಫಕ್ಕೃದ್ಧಿನ್ ಬಿನ್ ಷೇಕ್ ದಾವೂದ್ ಸಾಬಿ	7–20

P2
34

1	2	3	4
4	22	ತಿಮ್ಮಪ್ಪ ಮತ್ತು ಮಕ್ಕಳು	1–00
5	23	ತಿಮ್ಮಪ್ಪ ಬಿನ್ ಮುನಿಸ್ವಾಮಪ್ಪ	2–20
6	32	ರಜೀಯಾಬಿ	0–30
7	34	ಆಟೋ ಬಾಷಾ	0–31
8	35	ಮೌಲಲೀ	0–06
9	36	ಡಿ ಮಹಮ್ಮದ್ ಫಕೃದ್ದಿನ್	0–20
10	38	ಮಹಮ್ಮದ್ ಪ್ಯಾರುಸಾಬಿ	0–27
11	39	ಶಕೀಲ್ ಅಹಮ್ಮದ್	0–27
12	40	ಅಬ್ದುಲ್ ಖಾದರ್	0–29
13	3	ಅಪ್ಪಯ್ಯಣ್ಣ ಮತ್ತು ಮುನಿಶಾಮಿಗೌಡ	2–00
14	16	ಸಂಪಂಗಮ್ಮ	2–00
15	31	ಬಿ ಶ್ರೀನಿವಾಸಯ್ಯ ಬಿನ್ ಬೈರಪ್ಪ	1–38
16	33	ಪೈರೋಜ್‌ಬೀ ಯಿಂದ ನವೀನ್	0–26
17	43	ಮಸ್ತಾಕ್	
		ಒಟ್ಟು	**28–39**

787 (888) ಶ್ರೀ ರಘುಪತಿ ಭಟ್ ಕೆ (ಉಡುಪಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಂದಾಯ ಇಲಾಖೆಯಡಿ ದುಡಿಯುತ್ತಿರುವ 10450 ಗ್ರಾಮ ಸಹಾಯಕರನ್ನು ಖಾಯಂಗೊಳಿಸಿ ಸೇವಾ ಭದ್ರತೆ ನೀಡದೆ ಬಹುಕಾಲದಿಂದ ನಿಗದಿತ ಅಲ್ಪವೇತನ ನೀಡಿ ದುಡಿಸುತ್ತಿರುವುದರಿಂದ ಉಂಟಾಗಿರುವ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸದಿರಲು ಕಾರಣವೇನು ,

ಆ) ಮಾನ್ಯ ಉಚ್ಚ ನ್ಯಾಯಾಲಯದ ಸ್ಪಷ್ಟ ನಿರ್ದೇಶನದನ್ವಯ ಈ ವಿಚಾರದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳದಿರುವುದರಿಂದ ಇನ್ನು ಮುಂದೆ ಉಂಟಾಗಬಹುದಾದ ಪ್ರತಿಭಟನೆ, ಗೊಂದಲಗಳಿಗೆ ಯಾರು ಹೊಣೆ ,

ಇ) ಮಾನವೀಯ ನೆಲೆಯಲ್ಲಿ ಗ್ರಾಮಮಟ್ಟಲ್ಲಿ ಅನುದಾನದಿಂದ ಕಡಿಮೆ ಸಂಭಾವನೆಯಲ್ಲಿ ನಿಷ್ಠಾವಂತ ಸೇವೆ ಸಲ್ಲಿಸುತ್ತಿರುವ ಗ್ರಾಮ ಸಹಾಯಕರನ್ನು ಖಾಯಂಗೊಳಿಸಲು ಸೇವಾ ನಿಯಮಾವಳಿಗಳನ್ನು ರಚಿಸಿ ಡಿ ದರ್ಜೆಯ ನೌಕರ ಸೌಲಭ್ಯ ನೀಡುವ ಬಗ್ಗೆ ಸರ್ಕಾರದ ನಿಲುವೇನು ,

ಈ) ಕಂದಾಯ ಇಲಾಖೆಯಲ್ಲಿ ಗ್ರಾಮ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸಿ ಕನಿಷ್ಟ ವೇತನವನ್ನೂ ಸಹ ನೀಡದೆ ತ್ರಿಶಂಕು ಸ್ಥಿತಿಯಲ್ಲಿರುವ ನೌಕರರಿಗೆ ಬದಲಿ ವ್ಯವಸ್ಥೆಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ?